ಹಣದಿಂದ ಎಲ್ಲವನ್ನು ಅಳೆಯಲು ಸಾಧ್ಯವಿಲ್ಲ

ರಾಣೆಬೆನ್ನೂರ

ಕರ್ನಾಟಕ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ (ಕೆಪಿಎಂ) ಕಾಯಿದೆಗೆ ತಿದ್ದುಪಡಿ ಹಾಗೂ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯಿದೆಯನ್ನು ವಿರೋಧಿಸಿ ರವಿವಾರ ತಾಲೂಕಾ ಭಾರತೀಯ ವೈದ್ಯಕೀಯ ಸಂಘದ ಪದಾಧಿಕಾರಿಗಳು ಹಾಗೂ ವೈದ್ಯರು ನಗರದಲ್ಲ ವಿಧಾನಸಭಾ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ಐಎಂಎ ತಾಲೂಕು ಘಟಕದ ಅಧ್ಯಕ್ಷೆ ಡಾ। ವಿದ್ಯಾ ವಾಸುದೇವಮೂರ್ತಿ ಮಾತನಾಡಿ, ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣಕ್ಕೆ ಮುಂದಾಗಿರುವ ಸರ್ಕಾರದ ಕ್ರಮ ಖಂಡನೀಯ ಈ ಕಾನೂನು ತಿದ್ದುಪಡಿ ಅವೈಜ್ಞಾನಿಕವಾಗಿದ್ದು ಅದನ್ನು ಕೂಡಲೇ ವಾಸ ಪಡೆಯಬೇಕು ಎಂದು ಒತ್ತಾಯಿಸಿದರು.

ಡಾ। ಬಸವರಾಜ ಕೇಲಗಾರ ಮಾತನಾಡಿ, ವೈದ್ಯರ ಹಾಗೂ ರೋಗಿಗಳ ಭಾವನಾತ್ಮಕ ಸಂಬಂದವನ್ನು ಸೇವೆಯಲ್ಲಿ ಪರಿಗಳಿಸಲಾಗುತ್ತದೆ, ಕಾನೂನು ಹಾಗೂ ಹಣದಿಂದ ಎಲ್ಲವನ್ನು ಅಳೆಯಲು ಸಾಧ್ಯವಿಲ್ಲ, ಖಾಸಗಿ ವೈದ್ಯರ ಮೇಲೆ ಸರ್ಕಾರ ವಿದೇಯಕ ಹೇರುತ್ತಿರುವುದು ಸಲ್ಲದು, ಸರ್ಕಾರ ಈ ವಧೇಯಕ ಮಂಡನೆಯನ್ನು ವಾಪಾಸ ಪಡೆದು, ವೈದಯರಿಗೆ ರೋಗಿಗಳ ಸೇವೆ ಮಾಡಲು ಮುಕ್ತ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಡಾ। ತಂಡಿ, ಡಾ। ಅಭಿನಂದನ ಸಾವುಕಾರ, ಡಾ। ಯಮುನಾ, ಡಾ। ಮನೋಜ ಸಾವುಕಾರ ಡಾ।ನಾಗರಾಜ ದೊಡ್ಡಮನಿ, ಡಾ। ಪ್ರವೀಣ ಖನ್ನೂರು, ಡಾ।ನಂಜಪ್ಪ ಶೆಟ್ಟಿ ಕೇರಿ, ಡಾ। ರವಿ ಹಾದಿಮನಿ, ಡಾ।ನೆಗಳೂರ, ಡಾ। ಅನಿಲ ಬೆನ್ನೂರು, ಡಾ। ವಿರುಪಾಕ್ಷಪ್ಪ, ಡಾ। ಶೈಲಾಶ್ರೀ ಖನ್ನೂರು, ಡಾ। ವಾಸುದೇವಮೂರ್ತಿ, ಡಾ। ದೇಶಪಾಂಡೆ, ಡಾ। ರವಿ ಕುಲಕರ್ಣಿ, ಡಾ। ಅನೀಲ ಬೆನ್ನೂರ, ಡಾ। ರವಿ ಸಾಲ್ಮನಿ, ಡಾ। ಎಸ್.ಎಲ್.ಚಳಗೇರಿ, ಡಾ। ವಿದ್ಯಾ ಕೇಲಗಾರ, ಡಾ।ಸಂಜಯ ನಾಯಕ, ಡಾ। ನೆಗಳೂರ, ಡಾ।ಗಿರೀಶ ಕೆಂಚಪ್ಪನವರ ಇದ್ದರು.

182ನೇ ಜಯಂತ್ಯೋತ್ಸವ

ರಾಣೆಬೆನ್ನೂರ

ಇಲ್ಲಿನ ಶಿವಯೋಗೀಶ್ವರ ಸೇವಾ ಭಕ್ತ ಮಂಡಳಿ ವತಿಯಿಂದ ಮುರುಘೇಂದ್ರ ಮಹಾಶಿವಯೋಗಿಗಳವರ 182ನೇ ಜಯಂತ್ಯೋತ್ಸವ ಹಾಗೂ ಮುರುಘಾಮಠದ ಮಹಾಂತಪ್ಪಗಳವರ 24ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವು ಜೂ.25 ರಂದು ಮುಂಜಾನೆ 9:00 ಗಂಟೆಗೆ ನಗರದ ಶ್ರೀಗುರು ಕೊಟ್ಟೂರು ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಲಿದೆ. ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಮಹಾಸ್ವಾಮಿಜಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಲಿಂಗನಾಯಕನಹಳ್ಳಿ ಜಂಗಮಕ್ಷೇತ್ರದ ಚೆನ್ನವೀರ ಮಹಾಸ್ವಾಮಿಜಿಗಳು, ಬೆಳ್ಳಟ್ಟಿ ರಾಮಲಿಂಗೇಶ್ವರ ಮಠದ ಬಸವರಾಜ ಮಹಾಸ್ವಾಮಿಜಿಗಳು, ಅಗಡಿ ವಿರಕ್ತಮಠದ ಶಿವಯೋಗಿ ಮಹಾಸ್ವಾಮಿಜಿಗಳು, ಪುಟ್ಟಯ್ಯನಮಠದ ಗುರುಬಸವ ಮಹಾಸ್ವಾಮಿಜಿಗಳು ಕಾರ್ಯಕ್ರಮ ನೇತೃತ್ವ ವಹಿಸುವರು ಎಂದು ಕುಮಾರ ಜಂಬಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ ಕಾರ್ಯಕ್ರಮಗಳು

ಹಾವೇರಿ

ನಗರದವೀರಭದ್ರೇಶ್ವರಕಲ್ಯಾಣಮಂಟಪದಲ್ಲಿ ಶ್ರೀಮಾತೆ ಮಹಾಭದ್ರಕಾಳಿ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ, ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿಗಳಿಂದ ಇಷ್ಟಲಿಂಗ ಮಹಾಪೂಜೆ, ಸಹಸ್ರ ಸುಮಂಗಲೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ ಎಂದು ನಗರದ ಹರಸೂರು ಬಣ್ಣದಮಠದ ಅಭಿನವರುದ್ರ ಚನ್ನಮಲ್ಲಿಕಾರ್ಜು ಸ್ವಾಮಿಜಿ ಹೇಳಿದರು.

ನಗರದವೀರಭದ್ರೇಶ್ವರಕಲ್ಯಾಣಮಂಟಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು. ಶ್ರೀಮಾತೆ ಮಹಾಭದ್ರಕಾಳಿ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ ಅಂಗವಾಗಿ ಇಳಕಲ್‌ದ ಅನ್ನದಾನ ಶಾಸ್ತ್ರಿಗಳಿಂದ ದಿ.25 ಭಾನುವಾರದಿಂದ ದಿ. 25 ರವಿವಾರದವರೆಗೆ ಸಂಜೆ 6 ಗಂಟೆಗೆ ಪ್ರವಚನ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

ದಿ.25 ರ ಸಾಯಂಕಾಲ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿಗಳ ಪುರ ಪ್ರವೇಶವನ್ನು ಮಾಡಿಕೊಳ್ಳಲಾಗುವುದು, ದಿ. 26 ಸೋಮವಾರದಿಮದ 28. ಬುಧವಾರದವರೆಗೆ ಶ್ರೀಶೈಲ ಜಗದ್ಗುರುಗಳಿಂದ ವೀರಭದ್ರೇಶ್ವರ ಕಲ್ಯಾಣಮಂಟಪದಲ್ಲಿ ಬೆಳಿಗ್ಗೆ 7 ಗಂಟೆಗೆ ಇಷ್ಟಲಿಂಗ ಮಹಾಪೂಜಾ ಕಾರ್ಯಕ್ರಮ ಜರುಗಲಿದೆ ಎಂದರು.

ಈ ವಿನೂತನ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಆಚರಿಸಲು ಸಮಿತಿ ನಿರ್ಧರಿಸಿದ್ದು, ಇದಕ್ಕಾಗಿ ಸಕಲ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಅನೇಕ ಹರ, ಗುರು ಚರಮೂರ್ತಿಗಳು ಪಾಲ್ಗೊಳ್ಳಲಿದ್ದಾರೆ, ವೀರಶೈವ ಧರ್ಮ ಸಂಸ್ಥಾನೆಯ ಪಂಚ ಪೀಠಗಳಲ್ಲಿ ಒಂದಾದ ಶ್ರೀಶೈಲಂ ಪೀಠದಲ್ಲಿ ಅನಾದಿಕಾಲದಿಂದಲೂ ಶ್ರೀಮಾತೆ ಮಹಾಭದ್ರಕಾಳಿ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ ಕಾರ್ಯಕ್ರಮ ಹೋಳಿಹುಣ್ಣಿಯ ಮರುದಿನ ಜರುಗುತ್ತ ಬರುತ್ತಿತ್ತು, ಈ ಕಾರ್ಯಕ್ರಮದ ಮಹತ್ವ ನಾಡಿನ ಎಲ್ಲ ಭಾಗಗಳಲ್ಲಿಯೂ ತಿಳಿಯಲಿ ಎಂಬ ಉದ್ದೇಶದಿಂದ ನಾಡಿನ ವಿವಿದೆಡೆಗಳಲ್ಲಿ ವಿವಿದ ದಿನಾಂಕಗಳಂದು ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

ಶಿವಯೋಗೆಪ್ಪ ವಾಲಿಶೆಟ್ಟರ ಮಾತನಾಡಿ, ಶ್ರೀಮಾತೆ ಮಹಾಭದ್ರಕಾಳಿ ಶ್ರೀ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ ಕಾರ್ಯಕ್ರಮಗಳು ಈ ಹಿಂದೆ ನಾಡಿನ ವಿವಿಧ ಭಾಗಗಳಲ್ಲಿ ಜರುಗುತ್ತಿದ್ದವು. ಆದರೆ, ನಗರದಲ್ಲಿ ಇದೇ ಪ್ರಥಮ ಬಾರಿಗೆ ಈ ಕಾರ್ಯಕ್ರವನ್ನು ಆಚರಿಸಲಾಗುತ್ತಿದೆ, ಈ ಕಾರ್ಯಕ್ರಮವನ್ನು ನಾಡಿನಲ್ಲಿ ರೂಢಿಯಲ್ಲಿರುವ ಮದುವೆ ಸಮಾರಂಭತಂತೇನೇ ವಧು ಮತ್ತು ವರರ ಕುಟುಂಬದಗಳು ಹೇಗೆ ಸಾಂಪ್ರದಾಯದಂತೆ ನಡೆದುಕೊಳ್ಳುತ್ತವೆಯೋ ಅದೇ ರೀತಿ ಮದುವೆ ಸಮಾರಂಭವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ವಧು ವರರಾದ ಶ್ರೀಮಾತೆ ಮಹಾಭದ್ರಕಾಳಿ ಶ್ರೀ ವೀರಭದ್ರೇಶ್ವರ ಮೂರ್ತಿಗಳಲ್ಲಿ ಯಡೂರಿನಿಂದ ಬರಮಾಡಿಕೊಳ್ಳಲಾಗುವುದು. ನಗರದ ಮಲ್ಲಿಕಾರ್ಜುನ ಹಾವೇರಿ ಅವರು ಮಧುವಿನ ಕಡೆಯವರಾದರೆ ನಾಗರತ್ನಮ್ಮ ಬಸವರಾಜ ಪೂಜಾರ ಅವರು ವರನ ಕಡೆಯವರಾಗಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಂಗಾಧರ ಹೂಗಾರ ಹಾಗೂ ಇತರರು ಮಾತನಾಡಿದರು, ಶಿವಬಸಪ್ಪ ಹಲಗಣ್ಣನವರ, ಮಹೇಶ ಚಿನ್ನಿಕಟ್ಟಿ, ಪ್ರಭು ಹಿಟ್ನಳ್ಳಿ, ಶಿವರಾಜ ವಳಸಂಗದ, ರಾಚಣ್ಣ ಯಲಿವಾಳ , ಬಿ.ಬಸವರಾಜ ಪ್ರಭು ಹಿಟ್ನಳ್ಳಿ ಹಾಗೂ ಇತರರು ಉಪಸ್ಥಿತರಿದ್ದರು.

ಸಬ್ ಕಾ ಸಾಥ, ಸಬ್ ಕಾ ವಿಕಾಸ ಕಾರ್ಯಕ್ರಮದ ಪೂರ್ವಬಾವಿ ಸಿದ್ದತಾ ಸಭೆ ವಿಕ್ಷಣೆ

ಹಾವೇರಿ

ದಿನಾಂಕ 19-06-2017 ರಂದು ಸಬ್ ಕೇ ಸಾಥ್, ಸಬ್ ಕೇ ವಿಕಾಸ, ಸಮಾವೇಶದ ಪೂರ್ವಭಾವಿ ಸಿದ್ದತಾ ಸದ್ದತಾ ಸಭೆಯನ್ನು ವಿಕ್ಷಣೆ ಮಾಡುತ್ತಿರುವ ಅಧಿಕಾರಿಗಳು, ಜಿಲ್ಲಾಧ್ಯಕ್ಷರಾದ ಶ್ರೀ ಶಿವರಾಜ ಸಜ್ಜನರ, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜ ಕಲಕೋಟಿ, ಜಿಲ್ಲಾ ವಕ್ತಾರ ಸುರೇಶ ಹೊಸಮನಿ, ನಿರಂಜನ ಹೇರೂರ, ಪ್ರಭು ಹಿಟ್ನಳ್ಳಿ, ಪರಮೇಶ್ವರ ಮೇಗಳಮನಿ, ಈರಣ್ಣ ಲಮಾಣಿ, ಗಿರೀಶ ತುಪ್ಪದ ವೆಂಕಟೇಶ ದೈವಜ್ಞಾ, ಜಗದೀಶ ಮಲಗೋಡ, ವರುಣ ಆನವಟ್ಟಿ, ಪ್ರಕಾಶ ಉಜನಿಕೊಪ್ಪ, ಹನಮಂತಪ್ಪ ದೇವಗಿರಿ, ರೇಣುಕಾ ಪೂಜಾರ, ಮಹೇಶ ಹಂಜಗಿ, ಈರಣ್ಣ ಅಂಗಡಿ, ಬಡಗೇರ, ಚಪ್ಪರದಳ್ಳಿಮಠ ಉಪಸ್ಥತರಿದ್ದರು.

ಯುತಿಯ ಮೇಲೆ ಲೈಂಗಿಕ ಕಿರುಕುಳ

ಬೆಂಗಳೂರು

ಯುವತಿಯ ಮೇಲೆ ಪ್ಲಾಸ್ಟಿಕ್ ಹಲ್ಲಿ ಎಸೆದು ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಇಂದಿರಾನಗರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತ ಆರೋಪಿಯನ್ನು ಹೆಚ್‌ಎಎಲ್‌ನ ಎಲ್‌ಬಿ ನಗರದ ಮುರುಳಿ(34) ಎಂದು ಗುರುತಿಸಲಾಗಿದೆ. ಈತನಿಗೆ ವಿವಾಹವಾಗಿ ಇಬ್ಬರು ಮಕ್ಕಳಿದ್ದಾರೆ. ಕಳೆದ ಎರಡು ದಿನಗಳ ಹಿಂದಷ್ಟೆ ರಸ್ತೆಯಲ್ಲಿ ನಿಂತಿದ್ದ ಬಿಹಾರ ಮೂಲದ ಯುವತಿಯ ಮೇಲೆ ಪ್ಲಾಸ್ಟಿಕ್ ಹಲ್ಲಿ ಎಸೆದು ಹಲ್ಲಿ ತೆಗೆಯುವ ನೆಪದಲ್ಲಿ ಲೈಂಗಿಕ ದೌರ್ಜನ್ಯವೆಸಗಿದ್ದನು

ಯುವತಿಯು ನೀಡಿದ್ದ ದೂರು ಆಧರಿಸಿ ಆರೋಪಿ ಮುರುಳಿಯನ್ನು ಬಂಧಿಸಿರುವ ಇಂದಿರಾನಗರ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಚಿಕನ್ ಗುನ್ಯ ರೋಗದಿಂದ 30ಕ್ಕೂ ಹೆಚ್ಚು ಆಸ್ಪತ್ರಗೆ ದಾಖಲು

ಚಳ್ಳಕೆರೆ

ತಾಲ್ಲೂಕಿನ ದೊಡ್ಡೇರಿ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಚಿಕನ್ ಗುನ್ಯ ಹಾಗೂ ಜ್ವರ ಬಾದೆಯಿಂದ ಕಂಗಾಲಾಗಿದ್ದ ಜನರು ಈಗ ನಿಟ್ಟುಸಿರು ಬಿಟ್ಟಿದ್ದಾರೆ. ಕಾರಣ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿನಿತ್ಯ 30ಕ್ಕೂ ಹೆಚ್ಚು ಜನರು ಚಿಕಿತ್ಸೆಗೆ ದಾಖಲಾಗುತ್ತಿದ್ದು, ಭಾನುವಾರ ಕೇವಲ ಎಂಟು ಜನರು ಮಾತ್ರ ದಾಖಲಾಗಿರುತ್ತಾರೆ. ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎನ್.ಪ್ರೇಮಸುಧಾ ಮಾಹಿತಿ ನೀಡಿ, ಭಾನುವಾರ ಚಿತ್ರದುರ್ಗದಿಂದ ವಿಶೇಷ ತಂಡವನ್ನು ದೊಡ್ಡೇರಿ ಗ್ರಾಮಕ್ಕೆ ಕಳುಹಿಸಲಾಗಿದ್ದು, ಅಲ್ಲಿನ ಅಂಗನವಾಡಿ ಕೇಂದ್ರದಲ್ಲಿ ಗ್ರಾಮದ ಸುಮಾರು 40ಕ್ಕೂ ಹೆಚ್ಚು ಜನರಿಗೆ ಅಲ್ಲೇ ಚಿಕಿತ್ಸೆ ನೀಡಲಾಗಿದೆ. ಸೋಮವಾರವೂ ಸಹ ಈ ತಂಡ ಗ್ರಾಮಕ್ಕೆ ಭೇಟಿ ನೀಡಿ ಆರೋಗ್ಯ ತಪಾಸಣೆ ನಡೆಸಲಿದೆ.

ಕಾವೇರಿ ಕಣಿವೆಯಲ್ಲಿ ಉತ್ತಮ ಮಳೆ

ಬೆಂಗಳೂರ

ಕಾವೇರಿ ಕಣಿವೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಈ ಪ್ರದೇಶದ ಎಲ್ಲಾ ಅಣೆಕಟ್ಟುಗಳಲ್ಲಿ ಉತ್ತಮ ಒಳ ಹರಿವು ಕಂಡು ಬಂದಿದ್ದು, ಮೂರು ವರ್ಷದ ಸತತ ಬರದಿಂದ ಬಳಲಿದ್ದ ಈ ಪ್ರದೇಶದಲ್ಲಿ ಈ ಬಾರಿ ಉತ್ತಮ ಮಳೆಯಾಗುವ ಸಾಧ್ಯತೆಯಿದೆ. ಕೆಲ ವರ್ಷದಿಂದ ಕಾವೇರಿ ನದಿಗೆ ಅಡ್ಡವಾಗಿ ಕಟ್ಟಿರುವ ಕೃಷ್ಣರಾಜ ಸಾಗರ ಅಣೆಕಟ್ಟು ಸಂಪೂರ್ಣವಾಗಿ ಬರಿದಾಗಿತ್ತು. ಈ ಬಾರಿ ಹಾಸನ ಮತ್ತು ಕೊಡಗು ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ 1397 ಕ್ಯೂಸೆಕ್ ನೀರಿನ ಒಳಹರಿವು ದಾಖಲಾಗಿದ್ದು, ಜಲಾಶಯದ

»» 6ನೇ ಪುಟಕ್ಕೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, (ಜಿಲ್ಲಾ ಪಂಚಾಯತ್,)ತುಮಕೂರು

ಸಂಖ್ಯೆ: ತೋಉನಿ/ಹಿಸತೋನಿ/ಜಿಪಂ/ತು/ವಿನಿ1/14/2017-18 ದಿನಾಂಕ:12-06-2017

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ತೋಟಗಾರಿಕೆ ಇಲಾಖೆಯ ಹಾರ್ಟಿ ಕ್ಲಿನಿಕ್ ನಲ್ಲಿ ಒಬ್ಬ ವಿಷಯ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ : 01-06-2017 ರಿಂದ 31-3-2018 ರ ತನಕ 10 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಟೆಂಡರ್ ಧರಗಳನ್ನು ಆಹ್ವಾನಿಸಲಾಗಿದೆ. ದಿನಾಂಕ : 30-06-2017 ರ ತನಕ ಟೆಂಡರ್ ಅರ್ಜಿಗಳನ್ನು ಸಲ್ಲಿಸಬಹುದು. ಆರ್ಥಿಕ ಮತ್ತು ತಾಂತ್ರಿಕ ಬಿಡ್ಡಗಳನ್ನು ಈ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು ಹಾಗೂ ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ :0816-2278647 ರ ಮೂಲಕ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ತೋಟಗಾರಿಕೆ ಉಪನಿರ್ದೇಶಕರು (ಜಿಲ್ಲಾ ಪಂಚಾಯತ್,) ತುಮಕೂರು.

ಭೀಕರ ಕೊಲೆ : ಪ್ರಿಯಕರ ಸೆರೆ

ಬೆಂಗಳೂರು

ಅನ್ಯೆತಿಕ ಸಂಬಂಧದಕ್ಕೆ ಅಡ್ಡಿಯಾಗಿದ್ದ ಪತಿಯನ್ನು ಸುಪಾರಿ ಕೊಟ್ಟು ಸಾಕ್ಷಿ ಪತ್ತೆಯಾಗದಂತೆ ಭೀಕರವಾಗಿ ಕೊಲೆ ಮಾಡಿಸಿದ್ದ ಪತ್ನಿ ಆಕೆಯ ಪ್ರಿಯಕರ ಸೇರಿದಂತೆ ನಾಲ್ವರು ಯುವಕರನ್ನು ಬಂಧಿಸಿರುವ ಮದ್ದೂರು ಪೊಲೀಸರು ತನಿಖೆ ಕೈಗೊಂಡಿದ್ದಾರೆ..

ಪತಿ ಮುನಿರಾಜು ಕೊಲೆಗೆ ಸುಪಾರಿ ನೀಡಿದ್ದ ಪತ್ನಿ ಶಿಲ್ಪಾ (17), ಆಕೆಯ ಪ್ರಿಯಕರ ಸತೀಶ್ (24), ನಂದನ್ ಅಲಿಯಾಸ್ ಬಿಜೆಪಿ ಅರುಣ (19) ಹಾಗೂ ಕಾಂತರಾಜು (20) ನಂದನ್(21) ಹಾಗೂ ಕಾಂತರಾಜು(22) ಬಂಧಿತ ಆರೋಪಿಗಳಾಗಿದ್ದಾರೆ.

ಶಿಲ್ಪಾ ಮತ್ತು ಸತೀಶ್‌ನನ್ನು ಚನ್ನಪಟ್ಟಣ ತಾಲೂಕು ಹೊಸೂರುದೊಡ್ಡಿಯಲ್ಲಿ, ನಂದನ್ ಮತ್ತು ಕಾಂತರಾಜು ಅವರನ್ನು ಭೈರಾಪಟ್ಟಣದಲ್ಲಿ ಪೊಲೀಸರು ಬಂಧಿಸಿ ತನಿಖೆ ಕೈಗೊಂಡಿದ್ದಾರೆ. ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕಿನ ತೂಬಿನಕೆರೆಯ ರೇಣುಕಾ ಪ್ರಸಾದ್ ಅವರನ್ನು ಆರೋಪಿಗಳು ಕೊಲೆಮಾಡಿ ತಲೆ ಮರೆಸಿಕೊಂಡಿದ್ದರು.

ಟೊಯೋಟೋ ಕಂಪನಿಯಲ್ಲಿಕೆಲಸ ಮಾಡುತ್ತಿದ್ದ ಕೊಲೆಯಾಗಿರುವ ರೇಣುಕಾ ಪ್ರಸಾದ್ ಕೆಲಸ ಬಿಟ್ಟು ಖಾಸಗಿಯಾಗಿ ಎಲೆಕ್ಟ್ರಿಕಲ್ ಕೆಲಸ ಮಾಡಿಕೊಂಡಿದ್ದನು. ರೇಣುಕಾ ಪ್ರಸಾದ್ ಪತ್ನಿ ಶಿಲ್ಪಾ ವಿವಾಹಕ್ಕೆ ಮೊದಲು ಅಭಿಲಾಷ್ ಎಂಬಾತನನ್ನು ಪ್ರೀತಿಸುತ್ತಿದ್ದಳು. ನಂತರ ಸತೀಶ್‌ನ ಎಂಬಾತನ ಜೊತೆ ಅನ್ಯೆತಿಕ ಸಂಬಂಧ ಹೊಂದಿದ್ದಳು.

ಮಗಳು ಹಾದಿತಪ್ಪುತ್ತಿರುವುದರಿಂದ ಆತಂಕಗೊಂಡ ಶಿಲ್ಪಾ ಕುಟುಂಬದವರು ಆಕೆಗೆ ಇನ್ನೂ ಪ್ರಾಪ್ತ ವಯಸ್ಸು ತುಂಬುವ ಮುನ್ನವೇ ರೇಣುಕಾ ಪ್ರಸಾದ್ ಜೊತೆ ಬಲವಂತವಾಗಿ ವಿವಾಹ ಮಾಡಿದ್ದರು. ಮದುವೆಯ ನಂತರವೂ ಶಿಲ್ಪಾ, ಸತೀಶ್ ಜೊತೆ ಅನ್ಯೆತಿಕ ಸಂಬಂಧ ಮುಂದುವರೆಸಿದ್ದಳು. ಈ ವಿಷಯ ತಿಳಿದ ಪತಿ ರೇಣುಕಾ ಪ್ರಸಾದ್ ಇವರಿಬ್ಬರ ಸಂಬಂಧವನ್ನು ಪ್ರಶ್ನಿಸಿ ಜಗಳ ಮಾಡಿದ್ದ. ಆ ಹಿನ್ನೆಲೆಯಲ್ಲಿ ಶಿಲ್ಪಾ ತನ್ನ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿರುವ ಪತಿಯ ಕೊಲೆಗೆ ಸಂಚು ರೂಪಿಸಿ ಹತ್ಯೆಗೆ ಸುಪಾರಿ ನೀಡಿದ್ದಳು.

ಅಕ್ಷರ ದಾಸೋಹ ವಿಭಾಗ, ಜಿಲ್ಲಾ ಪಂಚಾಯತ್, ತುಮಕೂರು

ಸಂಖ್ಯೆ: ಜಿಕ ಅದಾ50/2014-15 ದಿನಾಂಕ:16-06-2017

ಟೆಂಡರ್ ಪ್ರಕಟಣೆ

2017-18 ನೇ ಸಾಲಿನಲ್ಲಿ ಟೆಂಡರ್ ಅಂಗೀಕರಿಸಿ ಕಾರ್ಯಾದೇಶ ನೀಡಿದ ದಿನಂಕದಿಂದ ಮುಂದಿನ ಒಂದು ವರ್ಷದ ಅವಧಿಗೆ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ವಿಭಾಗ, ಜಿಲ್ಲಾ ಪಂಚಾಯತ್ ತುಮಕೂರು ಇವರಿಗೆ ಜಿಲ್ಲೆಯ ಶಾಲಾ ಅಡುಗೆ ಕೇಂದ್ರಗಳಿಗೆ ಭೇಟಿ ನೀಡಲು ಮತ್ತು ಕಛೇರಿ ಉಪಯೋಗಕ್ಕಾಗಿ ಒಂದು ವಾಹನವನ್ನು ಹೊರಗುತ್ತಿಗೆ ಆಧಾರದಲ್ಲಿ ಬಾಡಿಗೆ ಮೇಲೆ ಪಡೆಯುವ ಸಲುವಾಗಿ ಆಸಕ್ತ ವಾಹನ ಮಾಲೀಕರಿಂದ (ಆರ್.ಸಿ.) ಹೊಂದಿದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ.

ರೂ 500ರ ಕ್ರಾಸ್ಡ್ ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್ ನಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ತುಮಕೂರು ಇವರ ಪದನಾಮದಲ್ಲಿ ಪಡೆದು ಕಛೇರಿಗೆ ಸಲ್ಲಿಸಿ ಟೆಂಡರ್ ಅರ್ಜಿಗಳನ್ನು ಪಡೆಯಬಹುದು.

ಟೆಂಡರ್ ಅರ್ಜಿ ನೀಡುವ ದಿನಾಂಕ : 16-06-2017 ರಿಂದ 1-07-2017 ರವರೆಗೆ. ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:1-07-2017 ರ ಸಂಜೆ 4 ಗಂಟೆಯೊಳಗೆ ಟೆಂಡರ್ ತೆರೆಯುವ ದಿನಾಂಕ:1-07-2017 ರ ಸಂಜೆ 4-30 ಗಂಟೆಗೆ (ತಾಂತ್ರಿಕ ಮತ್ತು ಆರ್ಥಿಕ

ಹೆಚ್ಚಿನ ಮಾಹಿತಿಗಾಗಿ ಶಿಕ್ಷಣಾಧಿಕಾರಿಯನ್ನು ದೂ.ವಾ. 0816-2261567 ಮೊ :9480835555 ಮೂಲಕ ಸಂಪರ್ಕಿಸಬಹುದಾಗಿದೆ.

(ಸಹಿ)- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ತುಮಕೂರು.

ಮರಡಿ ಬಸವೇಶ್ವರ ದೇವಸ್ಥಾನದ ಹುಂಡಿ ಹಣ ದೋಚಿ ಪರಾರಿ

ಬ್ಯಾಡಗಿ

ದುಷ್ಕರ್ಮಿಗಳ ತಂಡವೊಂದು ತಾಲೂಕಿನ ಹಳೇಶಿಡೇನೂರ ಗ್ರಾಮದ ಮರಡಿ ಬಸವೇಶ್ವರ ದೇವಸ್ಥಾನದ ಹುಂಡಿ (ಕಾಣಿಕೆ ಡಬ್ಬಿ) ಯನ್ನು ದೋಚಿ ಪರಾರಿಯಾದ ಘಟನೆ ಶನಿವಾರ ತಡರಾತ್ರಿ ನಡೆದಿದ್ದು, ಪ್ರಸಕ್ತ ವರ್ಷದಲ್ಲಿ ತಾಲೂಕಿನ ವಿವಿಧೆಡೆ ನಡೆದ ಹುಂಡಿ ಕಳುವು ಘಟನೆಯಾಗಿದ್ದು ಸಾರ್ವಜನಿಕರ ನಿದ್ದೆಗೆಡಿಸಿದೆ.

ಗ್ರಾಮದ ಜನನಿಬಿಡ ಪ್ರದೇಶದಲ್ಲಿಯೇ ಸದರಿ ದೇವಸ್ಥಾನವಿದ್ದು, ದುಷ್ಕರ್ಮಿಗಳ ತಂಡವು ಕಾಣಿಕೆ ಡಬ್ಬಿಯನ್ನು ಒಡೆದು ಸುಮಾರು 30 ಸಾವಿರಕ್ಕೂ ಹೆಚ್ಚು ಹಣವನ್ನು ದೋಚಿರುವುದಾಗಿ ಶಂಕಿಸಲಾಗಿದೆ. ಜನರು ಬೆಳಿಗ್ಗೆ ದೇವಸ್ಥಾನಕ್ಕೆ ತೆರಳಿದಾಗ ಕಳ್ಳತನವಾದ ಮಾಹಿತಿ ಲಭ್ಯವಾಗಿದೆ. ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದರಲ್ಲದೇ ಖದೀಮರಿಗಾಗಿ ವ್ಯಾಪಕ ಬಲೆ ಬೀಸಿದ್ದಾರೆ.

ವ್ಯವಸ್ಥಿತ ಜಾಲ: ಜನನಿಬಿಡ ಪ್ರದೇಶದಲ್ಲಿರುವ ದೇವಸ್ಥಾನದಲ್ಲೇ ಖದೀಮರು ಕಳ್ಳತನವೆಸಗಿದ್ದು ಜನರಲ್ಲಿ ಇನ್ನಷ್ಟು ಆತಂಕವನ್ನುಂಟು ಮಾಡಿದೆ, ಗ್ರಾಮೀಣ ಪ್ರದೇಶದಲ್ಲಿರುವ ಬಹುತೇಕ ದೇವಸ್ಥಾನಗಳಿಗೆ ಭದ್ರತೆ ಇಲ್ಲದಿರುವುದು ಕಳ್ಳಕಾಕರಿಗೆಅನುಕೂಲವಾಗಿದ್ದುತಾಲೂಕಿನಲ್ಲಿರುವ ಎಲ್ಲ ದೇವಸ್ಥಾನಗಳಿಗೆ ಭದ್ರತೆ ಒದಗಿಸುವ ಕುರಿತು ವ್ಯಾಪಕ ಚರ್ಚೆ ಆರಂಭವಾಗಿದೆ, ರಾತ್ರಿ ಸಮಯದಲ್ಲಿ ದೇವಸ್ಥಾನಗಳಿಗೆ ನುಗ್ಗುವ ಕಳ್ಳರು ಯಾವುದೇ ಅನುಮಾನ ಅಥವಾ ಸುಳಿವು ಸಿಗದಂತೆ ಕಳ್ಳತನ ಮಾಡುತ್ತಿದ್ದು ವ್ಯವಸ್ಥಿತ ಜಾಲವೊಂದು ತಾಲೂಕಿನಲ್ಲಿ ಕೆಲಸ ಮಾಡುತ್ತಿದೆ ಎಂಬ ಅನುಮಾನಗಳನ್ನು ಗ್ರಾಮಸ್ಥರು ವ್ಯಕ್ತಪಡಿಸುತ್ತಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ತೆರಳಿದರು ಪ್ರಕರಣದ ಬಗ್ಗೆ ಗ್ರಾಮಸ್ಥರು ದೂರು ನೀಡಲು ಹಿಂದೇಟು ಹಾಕಿದ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ..

ಪೊಲೀಸ ವೈಫಲ್ಯಕ್ಕೆ ಸಾಕ್ಷಿಯಾದ 4ನೇ ಘಟನೆ:ಕಳೆದ 4 ತಿಂಗಳಗಳಲ್ಲಿ ಇದು 4 ನೇ ಘಟನೆಯಾಗಿದ್ದು ಈವರೆಗೂ ಒಂದೂ ದೂರು ದಾಖಲಾಗಿಲ್ಲ, ತಾಲೂಕಿನ ಬನ್ನಿಹಟ್ಟಿ ಗ್ರಾಮದ ಮರಡಿಬಸವೇಶ್ವರ, ಕೊಲ್ಲಾಪುರ ಗ್ರಾಮದ ಪಂ.ಪುಟ್ಟರಾಜ ಗವಾಯಿಗಳ ಮಠ, ಹೊಸ ಶಿಡೇನೂರಿನ ಗಣೇಶ ದೇವಸ್ಥಾನಗಳ ಹುಂಡಿಗಳು ಕಳ್ಳತನವಾಗಿದ್ದು ಲಕ್ಷಾಂತರ ರೂಪಾಯಿಗಳನ್ನು ದೋಚಲಾಗಿದೆ. 4 ಘಟನೆಗಳು ಜರುಗಿದರೂ ಕಳ್ಳತನ ಪ್ರಕರಣ ಬೇಧಿಸದಿರುವುದು ವಿಪರ್ಯಾಸದ ಸಂಗತಿ.. ಕಿರಣ ಗಡಿಗೋಳ ಹೊಸ

ಪ್ರಜಾ ಪ್ರಗತಿ ಓದಿರಿ, ಪ್ರಗತಿ ಟಿವಿ ವೀಕ್ಷಿಸಿ

ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು.

ಅಜ್ಜಗೊಂಡನಹಳ್ಳಿ, ತುಮಕೂರು

ನಂ: ನಿಪಕೇತು/ಟೆಂಡರ್/ಸಿಆರ್/12/2017-18 ದಿನಾಂಕ:12-06-2017

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2017-18ನೇ ಸಾಲಿಗಾಗಿ ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು. ಇಲ್ಲಿನ ನಿರಾಶ್ರಿತರ ಉಪಯೋಗಕ್ಕಾಗಿ ಆಹಾರ ಪದಾರ್ಥಗಳು, ವಿಶೇಷ ಆಹಾರ ಪದಾರ್ಥಗಳು ಹಾಗೂ ಇತರೆ ಅಗತ್ಯ ಸಾಮಗ್ರಿಗಳನ್ನು ಖರೀದಿಗಾಗಿ ಹಾಗೂ ಹೊರಸಂಪನ್ಮೂಲದಿಂದ ಮಾನವ ಸೇವೆಯನ್ನು ಪಡೆಯಲು, ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಹಾಗೂ ಇಚ್ಛೆವುಳ್ಳ ಟೆಂಡರ್‌ದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳ ಅಡಿಯಲ್ಲಿ ಸ್ವರ್ಧಾತ್ಮಕ ದರಗಳಿಗೆ ಇ-ಟೆಂಡರ್ ವೇದಿಕೆಯ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ಟೆಂಡರ್ ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ: ದಿನಾಂಕ	ಟೆಂಡರ್ ಅಂದಾಜು ಮೊತ್ತ	ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ	ಇ ಎಂ ಡಿ ಮೊತ್ತ
1	ಆಹಾರ ಪದಾರ್ಥಗಳ ಪೂರೈಕೆ	ನಿಪಕೇತು/ಟೆಂಡರ್.ಸಿಆರ್ 12/2017-18 12-06-2017	40,00,000	14-07-2017 ಸಂಜೆ 4-00 ಗಂಟೆಗೆ	16-07-2017 ಬೆಳಗ್ಗೆ 11.00 ಗಂಟೆಗೆ	17-07-2017 ಬೆಳಗ್ಗೆ 11.00 ಗಂಟೆಗೆ	ರೂ 1,00,000
2	ಹೊರಸಂಪನ್ಮೂಲ ಮಾನವ ಸೇವೆ	ನಿಪಕೇತು/ಟೆಂಡರ್/ಸಿಆರ್ 10/2017-18 12-06-217	12,00,000	14-07-2017 ಸಂಜೆ 4-00 ಗಂಟೆಗೆ	1-07-2017 ಬೆಳಗೆ 12-00 ಗಂಟೆಗೆ	17-07-2017 ಬೆಳಗ್ಗೆ 11.00 ಗಂಟೆಗೆ	ರೂ 24,000

ಹೆಚ್ಚಿನ ಮಾಹಿತಿಗಾಗಿ www.eproc.karanataka.gov.in ಅಥವಾ ಅಧೀಕ್ಷಕರು ನಿರಾಶ್ರಿತರ ಪರಿಹಾರ ಕೇಂದ್ರ, ಅಜಗೊಂಡನಹಳ್ಳಿ ತುಮಕೂರು ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/- ಅಧೀಕ್ಷಕರು
ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು

ಮಹಾಧನ್ ಫರ್ಟಿಲೈಸರ್ಸ್ ತಯಾರಿಕಾ ಘಟಕದಲ್ಲಿ ಇನ್‌ಕ್ರೋ ತಂತ್ರಜ್ಞಾನ ಅಳವಡಿಕೆ

ಬೆಂಗಳೂರು,

ದೇಶದಲ್ಲಿ ರಸಗೊಬ್ಬರ ತಯಾರಿಕೆಯ ಪ್ರಮುಖ ಕಂಪನಿಗಳಲ್ಲಿ ಒಂದಾದ ಮಹಾಧನ್ ಫರ್ಟಿಲೈಸರ್ಸ್ ಮಹಾರಾಷ್ಟ್ರದ ತಲೋಜಾದಲ್ಲಿ ಹೊಸ ರಸಗೊಬ್ಬರ ತಯಾರಿಕಾ ಘಟಕವನ್ನು ವಿಸ್ತರಿಸಿದೆ. ಈ ಘಟಕದಲ್ಲಿ ಇತ್ತೀಚಿನ ಹೊಸ ತಂತ್ರಜ್ಞಾನವಾದ ಇನ್‌ಕ್ರೋವನ್ನು ಅಳವಡಿಸಿಕೊಳ್ಳಲಾಗಿದ್ದು, ಬಹು ದರ್ಜೆಯ ರಸಗೊಬ್ಬರವನ್ನು ತಯಾರಿಸಲಾಗುತ್ತದೆ. ಇದಲ್ಲದೇ, ಸ್ವಯಂಚಾಲಿತ ಬ್ಯಾಗ್ ಲೋಡಿಂಗ್ ಸೌಲಭ್ಯವನ್ನೂ ಹೊಂದಿದ್ದು, ಇಂತಹ ವ್ಯವಸ್ಥೆಯನ್ನು ಹೊಂದಿದ ಭಾರತದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿ ಅತ್ಯುತ್ತಮ ಪುನರ್ ಸಂಘಟಿತವಾದ ಕಂಪನಿ ಮಹಾಧನ್ ಆಗಿದ್ದು, ಗುಣಮಟ್ಟ ಮತ್ತು ಬದ್ಧತೆಗೆ ಹೆಸರುವಾಸಿಯಾಗಿರುವ ಕಂಪನಿಯಾಗಿದೆ. ದೇಶದಲ್ಲಿ ಜನಪ್ರಿಯವಾಗಿರುವ ಎನ್‌ಪಿಕೆ ದರ್ಜೆಯ 24:24:00 ಮತ್ತು ಬೆಂಟೋನೈಟ್ ಸಲ್ಫರ್ ತಯಾರಿಸುತ್ತಿದೆ. ಪ್ರಸ್ತುತ ವಾರ್ಷಿಕವಾಗಿ 3,00,000 ಟನ್ ರಸಗೊಬ್ಬರ ತಯಾರಿಸಲಾಗುತ್ತಿದೆ. ಈ ಹೊಸ ವಿಸ್ತರಣೆಯೊಂದಿಗೆ ಇನ್ನು ಮುಂದೆ ವಾರ್ಷಿಕವಾಗಿ 11 ಲಕ್ಷ ಟನ್‌ನಷ್ಟು ರಸಗೊಬ್ಬರ ತಯಾರಿಸಲಿದೆ. ಹೊಸ ಗ್ರೇಡಿನ ಮಹಾಧನ್ ರಸಗೊಬ್ಬರಗಳಾದ 10:26:26, 12:32:16 ಮತ್ತು 20:20:0:13 ಅನ್ನು ತಯಾರಿಸಲಾಗುತ್ತದೆ. ಬಲ್ಕ್ ಫರ್ಟಿಲೈಸರ್ಸ್, ಸ್ಪೆಷಾಲಿಟಿ ಫರ್ಟಿಲೈಸರ್ಸ್, ವಾಟರ್ ಸಲ್ಯೂಬಲ್ ಫರ್ಟಿಲೈಸರ್ಸ್, ಮೈಕ್ರೋ ನ್ಯೂಟ್ರಿಯೆಂಟ್ಸ್ ಮತ್ತು ಸೆಕೆಂಡರಿ ನ್ಯೂಟ್ರಿಯೆಂಟ್ಸ್ ಸೇರಿದಂತೆ 48 ಬಗೆಯ ಉತ್ಪನ್ನಗಳನ್ನು ಇಲ್ಲಿ ಉತ್ಪಾದಿಸಲಾಗುತ್ತದೆ.

ಈ ಉತ್ಪಾದನೆಯ ವಿಸ್ತರಣೆಯಿಂದಾಗಿ ಮಹಾಧನ್ ಇನ್ನೂ ಹೆಚ್ಚಿನ ರಾಜ್ಯಗಳನ್ನು ತಲುಪಲು ನೆರವಾಗಲಿದ್ದು, ಈ ಮೂಲಕ 7 ದಶಲಕ್ಷಕ್ಕೂ ಅಧಿಕ ರೈತರಿಗೆ ಗುಣಮಟ್ಟದ ರಸಗೊಬ್ಬರವನ್ನು ಪೂರೈಸಲಿದೆ. ಇದಲ್ಲದೇ, ಈ ವಿಸ್ತರಣೆಯಿಂದಾಗಿ ಮಹಾಧನ್ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಅತಿ ಹೆಚ್ಚು ಎನ್‌ಪಿಕೆ ಫರ್ಟಿಲೈಸರ್ ತಯಾರಿಸುವ ಕಂಪನಿಯಾಗಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ್ ಜತೆಗೆ ದೇಶದ ದಕ್ಷಿಣ ಮತ್ತು ಉತ್ತರ ರಾಜ್ಯಗಳ ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಲಿದೆ. ಈ ಕಂಪನಿಯ ಮತ್ತೊಂದು ವಿಶೇಷವೆಂದರೆ ತನ್ನೆಲ್ಲಾ ಉತ್ಪನ್ನಗಳ ಪ್ಯಾಕೇಜ್ ಮಾಡುವ ವಿನ್ಯಾಸಗಳು ಅಂತಾರಾಷ್ಟ್ರೀಯ ಮಟ್ಟದ ಅನುಭವವನ್ನು ನೀಡಲಿವೆ.

ಮಹಾಧನ್ ರಸಗೊಬ್ಬರವನ್ನು ಸ್ಮಾರ್ಟ್‌ಕೆಮ್ ಟೆಕ್ನಾಲಜೀಸ್ ಲಿಮಿಟೆಡ್ (ಎಸ್‌ಟಿಎಲ್) ತಯಾರಿಸುತ್ತಿದೆ. ಇದು ದೀಪಕ್ ಫರ್ಟಿಲೈಸರ್ಸ್ ಅಂಡ್ ಪೆಟ್ರೋಕೆಮಿಕಲ್ಸ್ ಕಾರ್ಪೊರೇಶನ್ ಲಿಮಿಟೆಡ್‌ನ (ಡಿಎಫ್‌ಪಿಸಿಎಲ್) ಅಂಗಸಂಸ್ಥೆಯಾಗಿದೆ. ಕಳೆದ 25 ವರ್ಷಗಳಿಂದ ಕೃಷಿ ಕ್ಷೇತ್ರದೊಂದಿಗೆ ಕೆಲಸ ಮಾಡುತ್ತಿರುವ ಕಂಪನಿ ಕೃಷಿ ಉತ್ಪನ್ನಗಳ ಇಳುವರಿ ಹೆಚ್ಚಳ ಮತ್ತು ಗುಣಮಟ್ಟವನ್ನು ಹೆಚ್ಚಳ ಮಾಡುವ ಗುರಿಯನ್ನು ಇಟ್ಟುಕೊಂಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಎಸ್‌ಟಿಎಲ್‌ನ ಅಗ್ರಿ ಬ್ಯುಸಿನೆಸ್‌ನ ಅಧ್ಯಕ್ಷ ಗೈ ಗೋವ್ಸ್ ಅವರು, ''ಈ ವಿಸ್ತರಣಾ ಘಟಕಕ್ಕೆ 800 ಕೋಟಿ ರೂಪಾಯಿಗಳ ಬಂಡವಾಳ ಹೂಡಲಾಗಿದ್ದು, ಉತ್ಪಾದನಾ ಸಾಮರ್ಥ್ಯವನ್ನು ಮೂರು ಪಟ್ಟು ಹೆಚ್ಚಳ ಮಾಡಿದ್ದೇವೆ. ಕಳೆದ 10 ವರ್ಷಗಳಲ್ಲಿ ದೇಶದ ರಸಗೊಬ್ಬರ ಕ್ಷೇತ್ರದಲ್ಲಿ ಇಷ್ಟೊಂದು ಪ್ರಮಾಣದ ವಿಸ್ತರಣೆ ನಡೆದಿರುವುದು ಇದೇ ಮೊದಲು. ನಮ್ಮ ಪ್ರಮುಖ ಉದ್ದೇಶ ನಮ್ಮ ರೈತರು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಬೇಕೆಂಬುದಾಗಿದೆ. ಈ ನಿಟ್ಟಿನಲ್ಲಿ ನಾವು ರೈತರೊಂದಿಗೆ ಸದಾ ಸಂಪರ್ಕದಲ್ಲಿದ್ದುಕೊಂಡು, ಅವರು ಬೆಳೆಯುವ ಬೆಳೆಗಳ ಇಳುವರಿ ಹೆಚ್ಚಳ ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ ನೆರವು ನೀಡುತ್ತಾ ಬಂದಿದ್ದೇವೆ ಎಂದು ತಿಳಿಸಿದರು.

- ಮಹಾರಾಷ್ಟ್ರದಲ್ಲಿರುವ ರಸಗೊಬ್ಬರ ಉತ್ಪಾದನಾ ಘಟಕ
- 800 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ
- ವಾರ್ಷಿಕ ಉತ್ಪಾದನಾ ಸಾಮರ್ಥ್ಯ 3 ಲಕ್ಷ ಟನ್‌ನಿಂದ 11 ಲಕ್ಷ ಟನ್‌ಗೆ ಏರಿಕೆ